ಶ್ರೀ ಎಚ್. ಡಿ. ದೇವೇಗೌಡ.— ವರದಿ ಬಂದಮೇಲೆ ಮುಂದಿನ ಕೆಲಸ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಇನ್‌ವೆಸ್ಟಿಗೇಷನ್ ಮಾಡದೇ ಹೋಗಿದ್ದರೆ ಈ ಸದನದಲ್ಲಿ ನಾನು ನಿಂತುಕೊಳ್ಳುವುದಕ್ಕಾಗುತ್ತಿರಲಿಲ್ಲ. ಹಾಕಿದಂಥ ಆರ್.ಸಿ.ಸಿ. ಮಾರನೇ ದಿವಸವೇ ಬಿದ್ದುಹೋದರೆ ಆ ಬಗ್ಗೆ ತನಿಖೆ ಮಾಡಲೇಬೇಕಾಗುತ್ತದೆ. ಇದು ದೇಶಕ್ಕೆ ಗೊತ್ತಾಗಬೇಕಲ್ಲ, ಸದನಕ್ಕೆ ಗೊತ್ತಾಗಬೇಕಲ್ಲ, ಆದ್ದರಿಂದ ತನಿಖೆ ಮಾಡುತ್ತಿದ್ದೇವೆ. ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದು ಒಂದು ಭಾಗ ಆದರೆ ಕೆಲಸ ಮುಂದುವರೆಸುವುದಕ್ಕೆ ಕ್ರಮ ತೆಗೆದುಕೊಳ್ಳುವುದು ಮತ್ತೊಂದು ಭಾಗ. ಅದರ ಅರಿವು ನಮಗೆ ಇದೆ. ಕ್ರಮ ತೆಗೆದುಕೊಳ್ಳುತ್ತೇವೆ.

ಭೀಮನಕುಂಟೆ ಗ್ರಾಮಕ್ಕೆ ಹೊಸಕೆರೆಯನ್ನು ಮಂಜೂರು ಮಾಡುವ ಬಗ್ಗೆ

೭೧೦. ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).— ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಧುಗಿರಿ ತಾಲ್ಲೂಕಿನ ಭೀಮನಕುಂಟೆ ಗ್ರಾಮದಲ್ಲಿ ಕೆರೆ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಇದನ್ನು ಕಟ್ಟಿಲು ಸರ್ಕಾರದವರು ಕೈಗೊಳ್ಳುವ ಕ್ರಮವೇನು ?

ಆ) ಭೀಮನಕುಂಟೆ ಗ್ರಾಮದ ಬಳಿ ಹರಿಯುವ ಮುತ್ತುರಾಯಸ್ವಾಮಿ ಹಳ್ಳಕ್ಕೆ ಮುತ್ತುರಾಯಸ್ವಾಮಿ ದೇವಸ್ಥಾನದ ಮುಂಭಾಗಕ್ಕೆ ಅಡ್ಡ ಕಟ್ಟಿಯನ್ನು ಹಾಕಿ ಕೆರೆಯನ್ನು ಕಟ್ಟಿದರೆ ರೈತರಿಗೆ ಅನುಕೂಲವಾಗುತ್ತದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ ಇದನ್ನು ಯಾವಾಗ ನಿರ್ಮಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು).—

ಅ) ಈಗಾಗಲೇ ಒಂದು ಕೆರೆಯಿದೆ.

ಆ) ಹೌದು.

ಇ) ಕೆಲಸವು ಆರ್ಥಿಕವಾಗಿ ಮತ್ತು ತಾಂತ್ರಿಕವಾಗಿ ಅಸಾಧುವೆಂದು ಕಂಡುಬಂದಿರುವುದರಿಂದ, ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ.— ಸ್ವಾಮಿ, ಭೀಮನ ಕುಂಟೆಯಲ್ಲಿ ಈಗಾಗಲೇ ಒಂದು ಕೆರೆ ಇದೆ ಎಂದು ಹೇಳುತ್ತಿದ್ದಾರೆ. ಅದು ಸತ್ಯಕ್ಕೆ ದೂರವಾದುದು. ನಾನು ಅನೇಕಸಾರಿ ನೋಡಿದ್ದೇನೆ. ನಾನು ಬೆಳ್ಳಾವಿ ಕ್ಷೇತ್ರದ ಎಂ.ಎಲ್ ಎ. ಆಗಿ ನೋಡಿದ್ದೇನೆ, ಈಚೆಗೂ ನೋಡಿದ್ದೇನೆ ತಮಗೆ ಬಂದಿರುವುದು ತಪ್ಪು ವರದಿ. ನನ್ನ ಎರಡನೇ ಪ್ರಶ್ನೆಗೆ 'ಹೌದು' ಎಂದು ಹೇಳಿದ್ದೀರಿ. ಈ ಊರು ಆಂಧ್ರಪ್ರದೇಶದಿಂದ ಕರ್ನಾಟಕಕ್ಕೆ ಬಂದದ್ದು. ಇಲ್ಲಿ ಹರಿಯತಕ್ಕ ಹಳ್ಳ ಏನಿದೆ ಅಲ್ಲಿ ಬಹಳಷ್ಟು ನೀರು ಬರುತ್ತಿದೆ. ಪಕ್ಕಕ್ಕೆ ಒಂದು ಫರ್ಲಾಂಗ್ ದೂರದಲ್ಲಿ ಆಂಧ್ರ ಬಾರ್ಡರ್ ಬರುತ್ತದೆ. ನೀರು ಅಲ್ಲಿಗೆ ಹೋಗುತ್ತದೆ. ಆದ್ದರಿಂದ ಈ ಊರಿನ ಜನ ೧೦-೧೫ ವರ್ಷದಿಂದ ಕೇಳುತ್ತಿದ್ದಾರೆ. ಕೆಲಸ ಆರ್ಥಿಕವಾಗಿ ಮತ್ತು ತಾಂತ್ರಿಕವಾಗಿ ಅಸಾಧವೆಂದು ಹೇಳಿದ್ದೀರಿ. ನಾನು ಹಿಂದೆ ಆ ಕ್ಷೇತ್ರದ ಎಂ ಎಲ್ ಎ. ಆಗಿದ್ದಾಗ ಟೆಕ್ನಿಕಲಿ ಫೈನಾನ್‌ಷಿಯಲ್ಲಿ ಫೀಸಿಬಲ್ ಎಂದು ಹೇಳಿದ್ದರು. ಈಗ ಕೊಟ್ಟಿರುವ ಉತ್ತರ ತಪ್ಪಿದ್ದಂತೆ ಕಾಣುತ್ತದೆ. ನನಗೆ ಇದು ಚೆನ್ನಾಗಿ ಗೊತ್ತಿದೆ. ಆದ್ದರಿಂದ ಇನ್ನೊಂದು ಸಾರಿ ಇದನ್ನು ಇನ್‌ವೆಸ್ಟಿಗೇಟ್ ಮಾಡಿಸಿ. ಈ ಕೆರೆ ಸಾರ್ವಜನಿಕ ಹಿತದೃಷ್ಟಿಯಿಂದ ಆಗಬೇಕು.

ಶ್ರೀ ಎಚ್. ಡಿ. ದೇವೇಗೌಡ.— ಅವರ ಮನಸ್ಸಿನ ಸಮಾಧಾನಕ್ಕಾಗಿ ನಾನು ಇದನ್ನು ಓದಿಬಿಡುತ್ತೇನೆ. ನನ್ನದೇನೂ ಇಲ್ಲ. One minor irrigation benefitting about 40 acres is a ready existing in Bheemanakunte village. Water is flowing near Muthuraya temple close to Andhra Pradesh without being used in Karnataka State. Spot inspection has been made by the Chief Engineer, Sri. Basvaraju 1986-87. ಅವರು ತುಮಕೂರು

ಜಿಲ್ಲೆಯವರೇ ಎಂದು ಕಾಣುತ್ತದೆ. ಅವರು ಕೊಟ್ಟಿರುವ ಒಂದಿ ಇದೆ. ಮಾನ್ಯ ಶಿವನಂಜಪ್ಪನವರಿಂದ ಪತ್ರ ಬಂದಮೇಲೆ ಅವರನ್ನೇ ನೋಡಿಕೊಂಡು ಬನ್ನಿ ಎಂದು ಹೇಳಿದೆ. ಹೋಗಿ ನೋಡಿದ್ದಾರೆ. ಆವರ ವರದಿಯ ಆಧಾರದ ಮೇಲೆ ಹೇಳುತ್ತಿದ್ದೇನೆ. ಟ್ಯಾಂಕ್ ಕಟ್ಟುವುದು ಫೀಸಿಬಲ್ ಅಲ್ಲ ಎಂದು ಬರೆಯುತ್ತಾರೆ. ಬೇಕಾದರೆ ನಿಮ್ಮ ಜೊತೆಯಲ್ಲಿ ಅವರನ್ನು ಕಳುಹಿಸಿಕೊಡುತ್ತೇನೆ. ನನಗೇನೂ ಅಡ್ಡಿಯಿಲ್ಲ. ಇದು ನನಗೆ ಬಂದಿರುವ ವರದಿ.

ಬಾಗಲ ಕೋಟೆಯಲ್ಲಿ ಉದಗಟ್ಟಿ ಯಾತ ನೀರಾವರಿ ಯೋಜನೆ

೭೯೨. ಜಿ. ವಿ. ಮಂಟೂರ್ (ಬಾಗಲಕೋಟೆ).— ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉದಗಟ್ಟಿ ಯಾತ ನೀರಾವರಿ ಯೋಜನೆಯನ್ನು ನಿರ್ಮಾಣ ಮಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಇದರ ಅಂದಾಜು ವೆಚ್ಚವೆಷ್ಟು ?

ಇ) ಸದರಿ ಯೋಜನೆಯಿಂದ ನೀರಾವರಿಯಾಗುವ ಕ್ಷೇತ್ರವೆಷ್ಟು ?

ಈ) ಈ ಯೋಜನೆಯಿಂದ ಪ್ರಯೋಜನ ಪಡೆಯುವ ಗ್ರಾಮಗಳು ಯಾವುವು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ೮.೮೪ ಲಕ್ಷ ರೂಗಳು (೧೯೮೪-೮೫ರ ದರ ಪಟ್ಟಿಯಂತೆ)

ಇ) ೪೦೦ ಎಕರೆಗಳು.

ಈ) ಉದಗಟ್ಟಿ ಗ್ರಾಮವು ಪ್ರಯೋಜನ ಪಡೆಯುತ್ತದೆ.

ಶ್ರೀ ಜಿ. ವಿ. ಮಂಟೂರ್.—ಮಾನ್ಯ ಮಂತ್ರಿಗಳು ೧೯೮೬-೮೭ನೇ ಸಾಲಿನಲ್ಲಿ ಕೆಲಸ ಶುರು ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—೧೯೮೬-೮೭ನೇ ಸಾಲಿನ ಬಜೆಟ್ ನಿಮ್ಮ ಮುಂದೆ ಇಡಲಾಗಿದೆ. ಒಂದೇ ಮಾತು ಹೇಳುತ್ತೇನೆ. ಈ ಕೆಲಸ ೧೯೮೬-೮೭ನೇ ಸಾಲಿನ ಬಜೆಟ್‌ನಲ್ಲಿ ಸೇರಿದ್ದು ೨೦ ಸಾವಿರ ರೂಪಾಯಿಗಳು ಇದಕ್ಕೆ ಪ್ರಾವಿಷನ್ ಮಾಡಿದೆ. ಆದರೆ ಕೆಲಸ ಇನ್ನೂ ತೆಗೆದುಕೊಂಡಿಲ್ಲ. ಸ್ವಾಮಿ, ಈ ಸಂದರ್ಭದಲ್ಲಿ ಆಶ್ವಾಸನೆ ಕೊಡುತ್ತೇನೆ, ಈ ಕೆಲಸವನ್ನು ವರ್ಷ ಕೈಗೆತ್ತಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಯೋಜನೆಗಳಿಗಾಗಿ ೧೯೮೬-೮೭ನೇ ಸಾಲಿನಲ್ಲಿ ಖರ್ಚು ಮಾಡಿದ ಹಣದ ಬಗ್ಗೆ

೯೪೦ ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು). ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಯೋಜನೆಯನ್ವಯ ೧೯೮೬-೮೭ ರಲ್ಲಿ ಖರ್ಚು ಮಾಡಿರುವ ಹಣವೆಷ್ಟು. (ತಾಲ್ಲೂಕುವಾರು ವಿವರ ನೀಡಬೇಕಾಗಿ ವಿನಂತಿ)

ಆ) ಪುತ್ತೂರು ಕ್ಷೇತ್ರಕ್ಕೆ ಹೊಂದಿಕೊಂಡು ಇರುವ ಸಣ್ಣ ಆಣೆಕಟ್ಟು ಹಲವಾರು ವರುಷಗಳಿಂದ ರಿಪೇರಿಯಲ್ಲಿದ್ದು ನೀರನ್ನು ಸರಬರಾಜು ಮಾಡದಿದ್ದರೂ, ರೈತರಿಂದ ನೀರಿನ ತೆರಿಗೆಯನ್ನು ವಸೂಲಿ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?